*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C: 408/2016
CW-18 PW-6

ಹೆಸರು : ಚಂದ್ರಕಾಂತ್ ಮೆಕಾಲೆ

ತಂದೆಯ ಹೆಸರು : ಅಂಬಾರಾಯ ಮೆಕಾಲೆ

ವಯಸ್ಸು : 56 ವರ್ಷ

ಉದ್ಯೋಗ : ಪಿ.ಎಸ್.ಐ. ಶಹಬಾದ್ ಪೋಲೀಸ್ ಠಾಣೆ

ವಾಸ ಸ್ಥಳ : ಶಹಬಾದ್

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 09.03.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2016 ರಿಂದ 2018ರವರೆಗೆ ಕಾಳಗಿ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 31.08.2016ರಂದು ಈ ಪ್ರಕರಣದ ಕಡತವನ್ನು ಚಾಸಾ-17ರವರಿಂದ ಪಡೆದು ಮುಂದಿನ ತನಿಖೆಯನ್ನು ಜರುಗಿಸಿರುತ್ತೇನೆ.

ದಿಃ 31.08.2016ರಂದು ಚಾಸಾ-15ರವರು ವರದಿಯಡಿಯಲ್ಲಿ ಇಬ್ಬರು ಆರೋಪಿತರನ್ನು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ಅದೇ ದಿನ ಚಾಸಾ- 4 ಮತ್ತು 5ರವರ ಸಮಕ್ಷಮ ಜಪ್ತು ಪಂಚನಾಮೆಯನ್ನು 1ನೇ ಆರೋಪಿತನ ಮನೆಯಲ್ಲಿ ಬೆಳಿಗ್ಗೆ 11.30 ರಿಂದ 12.00 ಗಂಟೆ ಸಮಯದಲ್ಲಿ ಜರುಗಿಸಿರುತ್ತೇನೆ ಮತ್ತು ರೂ.8,575/- ಹಣವನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಮಧ್ಯಾಹ್ನ 12.30 ರಿಂದ 01.00 ಗಂಟೆ ಸಮಯದಲ್ಲಿ 2ನೇ ಆರೋಪಿತನ ಮನೆಯಲ್ಲಿ ಜಪ್ತು ಪಂಚನಾಮೆಯನ್ನು ಚಾಸಾ- 4 ಮತ್ತು 5ರವರ ಸಮಕ್ಷಮ ಜರುಗಿಸಿ ರೂ.7,500/- ಹಣವನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಇಬ್ಬರು ಆರೋಪಿತರು ನಮ್ಮೊಂದಿಗೆ ಬಂದರೆ ಕಳ್ಳತನ ಮಾಡಿದ ಮು.ಮಾ. ಗಳನ್ನು

ಕೊಡುತ್ತೇನೆಂದು ಹೇಳಿದ ಕಾರಣ ಅವರಿಬ್ಬರನ್ನೂ ಕರೆದುಕೊಂಡು ಅವರು ತೋರಿಸಿದ ಸ್ಥಳವಾದ ಕನ್ನಡಗಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಬಳಿ ಹೋಗಿ ದೇವಸ್ಥಾನದ ಹಿಂದೆ ಇದ್ದ ಮತ್ತು ಆರೋಪಿತರು ತೋರಿಸಿದ ಕಬ್ಬಿಣದ ಆ್ಯಂಗಲ್ ಪಟ್ಟಿಯನ್ನು ಪಂಚರ ಸಮಕ್ಷಮ ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-6 ರಿಂದ 14 ರವರ ಪುರವಣಿ ಹೇಳಿಕೆಗಳನ್ನು ಪಡೆದಿರುತ್ತೇನೆ.

ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇದ್ದ ಕಾರಣ ಅವರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ನಾನು ಆ ದಿನ ವಶಕ್ಕೆ ಪಡೆದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಇಂದು ಗೈರು ಹಾಜರಿದ್ದು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿ ಸಲ್ಲಿಸಲಾಗಿದೆ.

ನಾನು ಜರುಗಿಸಿದ ಜಪ್ತು ಪಂಚನಾಮೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಜಪ್ತು ಪಂಚನಾಮೆಗಳು ಈಗಾಗಲೇ ನಿಪಿ-3 ರಿಂದ 5 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ- 3ಸಿದ 4ಸಿ ಮತ್ತು 5ಸಿ ಎಂದು ಗುರುತಿಸಲಾಯಿತು. ನಾನು ಪಡೆದ ಪುರವಣಿ ಹೇಳಿಕೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಚಾಸಾ-1 ರವರ ಪುರವಣಿ ಹೇಳಿಕೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಚಾಸಾ-15ರವರು ನೀಡಿದ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ವರದಿಯನ್ನು ನಿಪಿ-7 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ.ಎಸ್. ವಕೀಲರಿಂದ -

ನಿಪಿ-3ರಲ್ಲಿ ಆರೋಪಿತನ ಮನೆಯ ಮನೆ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ.

ನಾನು ಪಂಚನಾಮೆಯಲ್ಲಿ ಆರೋಪಿತನ ಮನೆಯಲ್ಲಿ ಎಷ್ಟು ಕೋಣೆಗಳಿದ್ದವು ಮತ್ತು ಯಾವ ಕೋಣೆಯಿಂದ ಹಣವನ್ನು ಜಪ್ತುಪಡಿಸಿಕೊಳ್ಳಲಾಗಿದೆ ಎಂದು ನಮೂದು ಮಾಡಿಲ್ಲ. ಜಪ್ತುಪಡಿಸಿಕೊಂಡ ಹಣದ ಮುಖಬೆಲೆಯನ್ನು ಪಂಚನಾಮೆಗಳಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. 1 ಮತ್ತು 2ನೇ ಆರೋಪಿತನ ಮನೆಯ ನಡುವೆ ಸುಮಾರು 4-5 ಮನೆಗಳಿವೆ. ಆರೋಪಿತರ ಮನೆಗಳು ಅಕ್ಕಪಕ್ಕದಲ್ಲಿವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

2ನೇ ಆರೋಪಿತನಿಗೆ ಸಂಬಂಧಪಟ್ಟಿದೆ ಎನ್ನುವ ಪಂಚನಾಮೆಯಲ್ಲಿ ಅವರ ಮನೆ ಸಂಖ್ಯೆ ನಮೂದು ಮಾಡಿಲ್ಲ ಎಂದರೆ ಸರಿ. 2ನೇ ಆರೋಪಿತನಿಂದ ಜಪ್ತುಪಡಿಸಿಕೊಳ್ಳಲಾಗಿದೆ ಎನ್ನುವ ಹಣದ ಮುಖಬೆಲೆಯನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಚಾಸಾ- 6 ರಿಂದ 14 ರವರ ಪುರವಣಿ ಹೇಳಿಕೆಗಳನ್ನು ನಾನು ಠಾಣೆಯಲ್ಲಿ ಪಡೆದಿರುತ್ತೇನೆ. ಆರೋಪಿತರ ಮನೆಯಿಂದ ದೇವಸ್ಥಾನವು ಸುಮಾರು 1 ರಿಂದ 1½ ಕಿಮೀ ದೂರದಲ್ಲಿದೆ. ನೀವು ಹೇಳುವ ಕಬ್ಬಿಣದ ರಾಡುಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ಸರಿ. ನೀವು ಯಾವುದೇ ಪಂಚನಾಮೆಗಳನ್ನು ಜರುಗಿಸಿಲ್ಲ ಮತ್ತು ಯಾವುದೇ ಸಾಕ್ಷಿದಾರರ ಪುರವಣಿ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತರ ವಿರುದ್ಧ ಯಾಂತ್ರಿಕವಾಗಿ ತನಿಖೆ ಮಾಡಿ ತಪ್ಪಾಗಿ ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಸ್ವಖುಷಿ ಹೇಳಿಕೆಯನ್ನು ನಿಮ್ಮ ಬಳಿ ನೀಡಿಲ್ಲ ಮತ್ತು ಆರೋಪಿತರು ನಿಮ್ಮನ್ನು ಯಾವ ಸ್ಥಳಕ್ಕೂ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಗುನ್ನೆ ಮಾಡಿಲ್ಲ ಎಂದು ಕಂಡು ಬಂದರೂ ಸಹ ತಪ್ಪಾಗಿ ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.